ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕಾಗಿ ಒಂದು ಬ್ಯಾಂಟ್ ನಾಲಾ ಮಾಡಿ ಆ ಕೆರೆಗಳಿಗೆ ನೀರು ಕೂಟ್ಟರೆ ವ್ಯವಸಾಯಕ್ಕೆ ಬಹಳ ಅನುಕೂಲವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನುಕೂಲವಾಗುತ್ತದೆ. ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಂಬಂಧದಲ್ಲಿ ನೇಮಿಸಿದ್ದ ಕಮಿಟಿಯವರು ತಮ್ಮ ವರದಿಯನ್ನು ಒಪ್ಪಿಸಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ವರದಿಮಾಡಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಆ ವರದಿ ಬಂದಮೇಲೆ ಈ ವಿಚಾರದಲ್ಲಿ ಧರವಸೆ ಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ರಿಪೋರ್ಟನ್ನು ನೋಡಿದಮೇಲೆ ಧರವಸೆ ಕೊಡಬಹುದು ಅಷ್ಟೆ. ಈಗಲೇ ಕೊಡುವುದಕ್ಕಾಗುವುದಿಲ್ಲ.

Maintenance of road from Harihar to Bangalore.

Q.—152. **Sri G. SIVAPPA** (Holalkere).—Will the Government be pleased to state :—

(*a*) whether the road from Harihar to Bangalore is maintained by the State;

(*b*) the amount provided for each mile of maintenance per year ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Rs. 750 per mile.

ಶ್ರೀ ಜಿ. ಶಿವಪ್ಪ.—ಹರಿಹರದಿಂದ ಬೆಂಗಳೂರಿಗೆ ಎಷ್ಟು ದೂರ ಇದೆ?

Mr. SPEAKER.—That question need not be answered.

ಶ್ರೀ ಜಿ ಶಿವಪ್ಪ.—ಈ ರಸ್ತೆಯಲ್ಲಿ ಸಿಮೆಂಟ್ ರೋಡ್ ಬೇರೆಯಿದೆ, ಟಾರ್ ರೋಡ್ ಬೇರೆಯಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಜಿ. ಶಿವಪ್ಪ.—ಸಿಮೆಂಟ್ ರಸ್ತೆ ಎಷ್ಟು ಮೈಲಿ ಟಾರ್ ರಸ್ತೆ ಎಷ್ಟು ಮೈಲಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಸಿಮೆಂಟ್‌ರಸ್ತೆಗೂ ಟಾರ್ ರಸ್ತೆಗೂ maintenanceಗಾಗಿ ಬೇರೆ ಬೇರೆಯಾಗಿ ಹಣ ಕೊಡುತ್ತಿರೋ ಅಥವಾ ಒಟ್ಟಿಗೆ ಕೊಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಬೇರೆ ಕೊಡುತ್ತೇವೆ.

ಶ್ರೀ ಜಿ. ಶಿವಪ್ಪ.—ಹೆಚ್ಚು ಕಡಮೆ ಎಷ್ಟು ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಪ್ರತಿ ವರ್ಷವೂ ಕೊಡುತ್ತಿರುವ ಹಣ ಖರ್ಚುಮಾಡಬೇಕೆಂದು ಕೊಡುತ್ತಿದೆಯೇ ಅಥವಾ ಉಳಿತಾಯಮಾಡಬೇಕೆಂದು ಕೊಡುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚುಮಾಡುವ ಅವಶ್ಯಕತೆಯಿದ್ದರೆ ಖರ್ಚುಮಾಡಬೇಕೆಂದೇ ಕೊಡುತ್ತೇವೆ.

ಶ್ರೀ ಜಿ. ಶಿವಪ್ಪ.—ಈಗ ಆ ರಸ್ತೆ ಯಾವ ರೀತಿ ಇದೆಯೆಂಬುದನ್ನೇನಾದರೂ ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧಾರಣಮಟ್ಟಿಗಿದೆಯೆಂದು ಗೊತ್ತಾಗಿದೆ.

ಶ್ರೀ ಜಿ. ಶಿವಪ್ಪ.—ಈ ರಸ್ತೆಯನ್ನು ಕೇಂದ್ರ ಸರ್ಕಾರಕ್ಕೆ ಹೈವೇ ಮಾಡುವ ದೃಷ್ಟಿಯಿಂದ Hand over ಮಾಡಬೇಕೆಂದೇನಾದರೂ proposals ಇವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು correspondence ನಲ್ಲಿದೆ.

ಶ್ರೀ ಜೆ. ಮಹಮದ್ ಇಮಾಂ (ಜಗಳೂರು).—ಹರಿಹರದಿಂದ ಬೆಂಗಳೂರಿನವರೆಗೆ ಸಿಮೆಂಟ್ ಕಾಂಕ್ರೀಟ್ ರಸ್ತೆ ಮಾಡಬೇಕೆಂದು ಒಂದು proposal ಇರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತು.

ಶ್ರೀ ಜೆ. ಮಹಮದ್ ಇಮಾಂ.—ಹರಿಹರದಿಂದ ದಾವಣಗೆರೆವರೆಗೆ ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದು ಜಲ್ಲಿಯನ್ನು ಶೇಖರಿಸಿದ್ದು ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಜೆ. ಮಹಮದ್ ಇಮಾಂ.—ಈ ಪೂರ್ತ ರಸ್ತೆ ಬಹಳ ಮುಖ್ಯವಾದದ್ದಾಗಿರುವುದರಿಂದ ಮೈಸೂರು ಸರ್ಕಾರದವರು ತಾವೇ ಅಥವಾ ಕೇಂದ್ರ ಸರ್ಕಾರದ ಸಹಾಯದಿಂದಲೋ ಇದನ್ನು ಸಿಮೆಂಟ್ ಕಾಂಕ್ರೀಟ್ ಮಾಡಿದರೆ ಟ್ರಾಫಿಕ್ಕಿಗೆ ಬಹಳ ಅನುಕೂಲವಾಗುತ್ತದೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ. ಆದರೆ ದುಡ್ಡಿನ ಅಭಾವದ ದೆಸೆಯಿಂದ ಸುಮ್ಮನಿದ್ದೇವೆ.

ಶ್ರೀ ಜೆ ಮಹಮದ್ ಇಮಾಂ.—ಈಗಿರುವ ಸ್ಥಿತಿಯಲ್ಲಿ ರಸ್ತೆ ಬಹಳ ಅನಮರ್ಪಕವಾಗಿದ್ದು ಬರುವ ಕಾರುಗಳ ಸ್ಪ್ರಿಂಗ್‌ಗಳು ಮುರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಕೆಲವರ ಅನುಭವದಲ್ಲಿರಬಹುದು.

ಶ್ರೀ ಜೆ. ಮಹಮದ್ ಇಮಾಂ.—ಮೊನ್ನೆ ನಾನಿಲ್ಲಿಗೆ ಬರುತ್ತಿರುವಾಗ ಕಾರಿನ ಸ್ಪ್ರಿಂಗ್ ಮುರಿದು ಹೋಗಿದ್ದು ತಮ್ಮ ಗಮನಕ್ಕೆ ಬಂದಿದೆಯೇ ?

Sri Kadidal MANJAPPA.—I am very sorry to hear that.

ಶ್ರೀ ಜೆ. ಮಹಮದ್ ಇಮಾಂ.—ಈ ರಸ್ತೆಯನ್ನು ಒಳ್ಳೆಯ ಸ್ಥಿತಿಗೆ ತರುವುದಕ್ಕೆ ಸರ್ಕಾರದವರು ಏನು ಖರ್ಚು ಮಾಡಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಹೇಳುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಒಂದು ಸಿಮೆಂಟ್ ಕಾಂಕ್ರೀಟ್ ಸ್ಕೀಮನ್ನು ಕೈಕೊಳ್ಳಬೇಕೆಂದಿದೆ. ಮುಂದಿನ ಸಾರಿ ಹಣಕಾಸಿನ ಪರಿಸ್ಥಿತಿ ಉತ್ತಮವಾದರೆ ಕೆಲವು ಮುಖ್ಯವಾದ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ಮಾಡಬೇಕೆಂದು ಯೋಚನೆಮಾಡುತ್ತೇವೆ.

ಶ್ರೀ ಜೆ. ಮಹಮದ್ ಇಮಾಂ.—ಈಗ ಸಿಮೆಂಟ್ ಕಾಂಕ್ರೀಟನ್ನು ಸ್ವಲ್ಪಮಟ್ಟಿಗಾದರೂ ಮಾಡುವುದಕ್ಕೆ ಒಂದು ಸ್ಪೆಷಲ್ allotment ಮಾಡಲು ಸಾಧ್ಯವಿಲ್ಲವೇ?

Sri Kadidal MANJAPPA.—I will try.

Sri A. BHEEMAPPA NAIK (Molakalmuru).—How is it classified, Class A or B or C ?

Sri Kadidal MANJAPPA.—Class I.

Sri A. BHEEMAPPA NAIK.—Is the grant uniform throughout, both for cement and tarred and ordinary roads?

Sri Kadidal MANJAPPA.—I believe the total grant is uniform I will let you know afterwards.

Sri A. BHEEMAPPA NAIK.—I am asking whether the need for maintaining tarred road is the same as the need for maintaining concrete road?

Sri Kadidal MANJAPPA.—It is not so, but the Engineers there select the bad portions and then use the money.

ಶ್ರೀ ಎ. ಭೀಮಪ್ಪನಾಯಕ್.—ಎಷ್ಟು ಮೈಲಗಳು ರಿಪೇರಿಯಾಗಬೇಕಾಗಿದೆಯೆಂದು ಹಾಲ ಇರುವ ಏರ್ಪಾಡನ್ನು ನೋಡಿಕೊಂಡು ಕೊಟ್ಟಿರುವ ಒಟ್ಟು ಗ್ರಾಂಟನ್ನು ಉಪಯೋಗಿಸುವುದಕ್ಕೆ ಅವರಿಗೆ ಅವಕಾಶ ವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎ. ಭೀಮಪ್ಪನಾಯಕ್—ಸಿಮೆಂಟ್ ಕಾಂಕ್ರೀಟ್ ಮಾಡುವುದರಿಂದ maintenance ಖರ್ಚು ಬಹಳವಾಗಿ ಕಡಮೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ತಮಗೂ ಗೊತ್ತಿದೆ, ನಮಗೂ ಗೊತ್ತಿದೆ.

ಶ್ರೀ ಎ. ಭೀಮಪ್ಪನಾಯಕ್.—ರಾಷ್ಟ್ರದ ಆರ್ಥಿಕ ದೃಷ್ಟಿಯಿಂದ ಮತ್ತು ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ಈ ರೀತಿ ಸಿಮೆಂಟ್ ಕಾಂಕ್ರೀಟ್ ಮಾಡಿಸುವುದು ಜನತೆಗೂ ಸರ್ಕಾರಕ್ಕೂ ಅನುಕೂಲವೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಸಂದೇಹವೇ ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ನಮ್ಮಲ್ಲೇ ಭದ್ರಾವತಿಯಲ್ಲಿ ಸಿಮೆಂಟು ತಯಾರಾಗುತ್ತಿದೆಯೆಂದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಎಲ್ಲರಿಗೂ ಗೊತ್ತಿರುವ ವಿಚಾರವೇ.

ಶ್ರೀ ಎ. ಭೀಮಪ್ಪನಾಯಕ್.—ನಮ್ಮಲ್ಲಿ ಉತ್ಪತ್ತಿಯಾಗುವ ಸಿಮೆಂಟನ್ನು ನಾವೇ ಉಪಯೋಗಿಸಿಕೊಂಡು ಅಲ್ಲಿ ಬಿದ್ದಿರುವ ಜಲ್ಲಿಯನ್ನೇ ತೆಗೆದುಕೊಂಡು ಬರೀ ಕೂಲಿಮಾತ್ರ ಕೊಟ್ಟು ಸರ್ಕಾರದವರು ಈ ಕೆಲಸವನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಿಲ್ಲವೇ?

Mr. SPEAKER.—You are arguing the case.

ಶ್ರೀ ಎ. ಭೀಮಪ್ಪನಾಯಕ್.—ನ್ಯಾಷನಲ್ ಹೈವೇಸ್ ಮಾಡುವುದಕ್ಕೆ ಒಂದು ಮೈಲಗೆ ಎಷ್ಟು ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ?

Mr. SPEAKER.—Rs. 3,000 a mile.

ಶ್ರೀ ಎ. ಭೀಮಪ್ಪನಾಯಕ್.—3,000 ರೂಪಾಯಿಗಳನ್ನು ಈ ರೀತಿ ಕೊಡುವ ಬದಲು ಅದೇ 3,000 ರೂಪಾಯಿಗಳನ್ನು ನಾವೇ maintenanceಗೆ ಇಟ್ಟು ಕೊಂಡರೆ ನಮ್ಮ ರಸ್ತೆಗಳನ್ನು ಬಹಳ ಚೆನ್ನಾಗಿಟ್ಟು ಕೊಳ್ಳಬಹುದಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನಿಜ.

ಶ್ರೀ ಎ. ಭೀಮಪ್ಪನಾಯಕ್.—ಆದ್ದರಿಂದ ಈ ರಸ್ತೆಗಳನ್ನು ನ್ಯಾಷನಲ್ ಹೈ-ವೇಸ್‌ಗೆ ಒಪ್ಪಿಸುವ ಬದಲು ನಾವೇ ಇಟ್ಟುಕೊಳ್ಳುವುದು ಸೂಕ್ತವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಅದು correspondenceನಲ್ಲಿದೆಯೆಂದು ಹೇಳಿದ್ದೇನೆ.

Anecut across Yennehole near Inam Sindhuvalli Village.

Q.—171. **Sri M. LINGANNA** (Nanjangud).—

Will the Government be pleased to state.—

(*a*) whether an attempt had been made by them to construct a small anecut across Yennehole River near Inam Sindhuvalli Village, Jayapura Hobli, Mysore Taluk:

(*b*) if so, when; and whether an estimate is made in this behalf;

(*c*) the total cost of the estimate made;

(*d*) the total extent of lands that would be cultivated by this little anecut;

(*e*) whether people are agitating through petitions to take up this work?

A.—**Sri Kadidal MANJAPPA** (Minister for Revenue and Public Works).—

(*a*) Yes, not near Sindhuvalli but near Doddahalli.

(*b*) During the year 1949; yes.

(*c*) 5·6 lakhs.

(*d*) 950 acres.

(*e*) Yes.

Sri M. LINGANNA.—It is not Doddahalli but Dadadahalli. ಈಗ ನೀವು ತಯಾರು ಮಾಡಿರುವ ಎಸ್ಟಿಮೇಟು ಯಾವ ಮಟ್ಟದಲ್ಲಿದೆಯೆಂದು ಹೇಳುತ್ತೀರಾ?

Sri Kadidal MANJAPPA.—The Project was deferred in the year 1950 as per G. O. dated 15-3-50.

ಶ್ರೀ ಎಂ. ಲಿಂಗಣ್ಣ.—ಈ 15-3-50ನೆಯ ಸರ್ಕಾರಿ ಹುಕುಮಿನ ಪ್ರಕಾರ defer ಮಾಡಿದೆಯೆಂದು ಹೇಳಿದ್ದೀರಿ; ಹಾಗೆ defer ಮಾಡುವುದಕ್ಕೆ ಕಾರಣವನ್ನು ಹೇಳುತ್ತೀರಾ?

Sri Kadidal MANJAPPA.—It is costly. The Government have issued a direction to recast the estimate to suit the present-day conditions and also to gauge the water supply.